ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ಬೆಳಗಾವಿ ವಿಭಾಗದ ಸಹಾಯಕ ಆಯುಕ್ತರು (ವಾಣಿಜ್ಯ ತೆರಿಗೆ) ಕ್ರಿಮಿನಲ್ ಪ್ರಕರಣದ ವಿವರ ನೀಡುವ ಬಗ್ಗೆ

ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) :-

1225 (1436) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಬೆಳಗಾವಿ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಯಾವ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ವಿರುದ್ಧ ಇಲಾಖಾ ವಿಚಾರಣೆ ಮತ್ತು ನ್ಯಾಯಾಲಯ ವಿಚಾರಣೆ ಪ್ರಕರಣಗಳು ಮುಕ್ತಾಯಗೊಂಡಿವೆ ; (ವಿವರ ನೀಡುವುದು)

(ಆ) ಯಾವ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ವಿರುದ್ಧ ಸರ್ಕಾರವು ಇಲಾಖಾ ವಿಚಾರಣೆ ನಡೆಸಿ ಶಿಸ್ತು ಕ್ರಮವನ್ನು ಕೈಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಿದೆ ; ಮತ್ತು ಅವರ ಸೇವೆಯನ್ನು ಖಾಯಂಗೊಳಿಸಿ ಆದೇಶ ಹೊರಡಿಸಿದೆ ; (ವಿವರ ನೀಡುವುದು)

(ಇ) ಈ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು ಅವರು ಪಡೆಯಬೇಕಾಗಿದ್ದ ಸೇವಾ ಸೌಲಭ್ಯಗಳನ್ನು ಪಡೆಯಲು ಅರ್ಹರಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆಂದು ಸರ್ಕಾರವು ಆದೇಶಿಸಿದೆಯೇ; ಆದೇಶಿಸಿದ್ದರೆ, ಅದರ ಪ್ರತಿ ನೀಡುವುದು ;

(ಈ) ಸರ್ಕಾರದ ಅದೇಶದಲ್ಲಿ ಅಧಿಕಾರಿಯು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆಂದು ತಿಳಿಸಿರುವುದರಿಂದ, ಆ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ಸೇವೆಯನ್ನು ಸೇವಾ ಹಿರಿತನದ ಆಧಾರದ ಮೇಲೆ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ವೃಂದದಲ್ಲಿ ಮತ್ತು ವಾಣಿಜ್ಯ ತೆರಿಗೆ ಉಪ ಆಯುಕ್ತರ ವೃಂದದಲ್ಲಿ ಯಾವ ದಿನಾಂಕದಿಂದ ಅರ್ಹತಾ ದಿನಾಂಕವನ್ನು ನಿಗದಿಪಡಿಸಲಾಗಿದೆ ; ಇಲ್ಲವಾದಲ್ಲಿ, ಕಾರಣಗಳೇನು ತಿಳಿಸುವುದು ;

(ಉ) ಒಬ್ಬ ಸರ್ಕಾರಿ ನೌಕರ/ಅಧಿಕಾರಿಯು ಕ್ರಿಮಿನಲ್ ಪ್ರಕರಣದಲ್ಲಿ ಮತ್ತು ಇಲಾಖಾ ವಿಚಾರಣೆಯಲ್ಲಿ ದೋಷಮುಕ್ತಗೊಂಡ ಬಳಿಕ ಆ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮವನ್ನು ಕೈಬಿಟ್ಟು ಅಧಿಕಾರಿಯು ಯಾವ ಸೇವಾ ಸೌಲಭ್ಯಗಳನ್ನು ಪಡೆಯಲು ಅರ್ಹರಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆಂದು ಸರ್ಕಾರವು ತಿಳಿಸಿರುವುದರಿಂದ ಅಂತಹ ಅಧಿಕಾರಿಯು ಸಂವಿಧಾನ ಬದ್ಧ ಹುದ್ದೆ ಪಡೆಯಲು ಕಾನೂನು ಅಡಚಣೆ ಇದೆಯೇ ;

(ಊ) ದೂರುದಾರರು ತಮ್ಮ ಹೆಸರು, ವಿಳಾಸ, ತಿಳಿಸದೇ ಒಬ್ಬ ಸರ್ಕಾರಿ ನೌಕರನ ವಿರುದ್ಧ ದೂರು ಸಲ್ಲಿಕೆ ಮಾಡಿದ್ದಲ್ಲಿ, ಅಂತಹ ಸರ್ಕಾರಿ ನೌಕರನಿಂದ ಸಂಬಂಧಿಸಿದ ಇಲಾಖಾ ಮುಖ್ಯಸ್ಥರು ಸಮಜಾಯಿಷಿಯನ್ನು ಪಡೆಯಬಹುದೇ ; ಈ ಸಂಬಂಧ ಸರ್ಕಾರಿ ಆದೇಶ/ಸುತ್ತೋಲೆ ಇದ್ದಲ್ಲಿ ಒದಗಿಸುವುದು ?